# ಶ್ರೀಮಾತೆಯವರೊಡನೆ ಮಾತುಕತೆ



(ಅಂದು ದಿನಾಂಕ ೩.೮.೧೯೧೧. ಭಕ್ತೆ ಸರಯೂ ಬಾಲಾ ದೇವಿ ಶ್ರೀಮಾತೆಯವರಿಂದ ದೀಕ್ಷೆ ಪಡೆದುಕೊಂಡಿದ್ದಾರೆ. ನಂತರ ಶ್ರೀಮಾತೆಯವರ ಜೊತೆ ಗಂಗಾಸ್ನಾನಕ್ಕೆ ಹೋಗಿದ್ದಾರೆ. ಮನೆಯ ಒಳಗೆ ಹೋಗುವಾಗ, ಕಾಲು ತೊಳೆದುಕೊಳ್ಳಲು ತಮ್ಮ ತಂಬಿಗೆಯ ನೀರನ್ನೇ ಉಪಯೋಗಿಸುವಂತೆ ಶ್ರೀಮಾತೆ ಹೇಳುತ್ತಾರೆ. ಆಮೇಲೆ ಏನಾಯಿತು? – ಮುಂದೆ ಓದಿ.)

ನಾನು ಹೇಳಿದೆ, "ನೀವು ಮುಟ್ಟದ್ದೀರಿ – ನಾನು ಹೇಗೆ ಅದನ್ನು ಉಪಯೋಗಿಸಲಿ" ಎಂದು. ಶ್ರೀಮಾತೆ "ಸರಿ, ಸ್ವಲ್ಪ ತಲೆಯ ಮೇಲೆ ಚುಮುಕಿಸಿಕೊಂಡು ನಂತರ ಉಪಯೋಗಿಸು" ಎಂದರು.

ನಾನು 'ಅದು ಹೇಗೆ ಆಗುತ್ತೆ' ಎಂದು ಹೇಳಿ ಮತ್ತೊಂದು ಪಾತ್ರೆ ತಂದು, ಅದರಿಂದ ನೀರು ತೆಗೆದುಕೊಂಡು ಕಾಲನ್ನು ತೊಳೆದುಕೊಂಡೆ (ಏಕೆಂದರೆ ನನ್ನ ಮನಸ್ಸಿನ್ನೂ ಶುದ್ಧಭಾವ ಪಡೆದಿಲ್ಲ. ಆದ್ದರಿಂದ ಹೀಗೆ ಮಾಡಬೇಕಾಯಿತು). ಅಷ್ಟರವರೆಗೆ ಶ್ರೀಮಾತೆಯವರು ನನಗಾಗಿ ಕಾದು ನಿಂತಿದ್ದರು!

ಮಹಡಿಯ ಮೇಲೆ ಹೋಗಿ ಎರಡು ಊಟದೆಲೆಗಳಲ್ಲಿ ಪ್ರಸಾದವನ್ನು ಅಣಿಮಾಡಿ ತಂದು, ನನಗೊಂದನ್ನು ಕೊಟ್ಟು, ಹತ್ತಿರ ಕುಳಿತು ತಿನ್ನುವಂತೆ ಹೇಳಿದರು. ಆದರೆ ನನ್ನ ಮನಸ್ಸಿನಲ್ಲಿ ಮೊದಲು ಶ್ರೀಮಾತೆಯವರ ಚರಣಾಮೃತವನ್ನು ಸೇವಿಸುವ ಆಸೆ. ಅದನ್ನು ತಿಳಿಸಿದೆ. "ಹಾಗಾದರೆ ಕೆಳಗಿನಿಂದ ಸ್ವಲ್ಪ ನಲ್ಲಿನೀರನ್ನು ಹಿಡಿದು ತಾ" ಎಂದರು. ನನ್ನ ಕೈಯಲ್ಲಿ ಪಾತ್ರೆಯನ್ನು ಹಿಡಿದುಕೊಳ್ಳುವಂತೆ ಹೇಳಿ ತಮ್ಮೆರಡೂ ಕಾಲುಗಳ ಅಂಗುಷ್ಠಗಳನ್ನು ನೀರಿನಲ್ಲಿ ಮುಳುಗಿಸಿ ಏನೋ ಮಂತ್ರೋಚ್ಚಾರಣೆ ಮಾಡಿದರು. ಅದೇನೆಂದು ತಿಳಿಯದು. ಆದರೆ ಅವರ ತುಟಿ ಅಲುಗುತ್ತಿರುವುದನ್ನು ನೋಡಿದೆ. ಕೊನೆಗೆ ಹೇಳಿದರು "ಈಗ ತೆಗೆದುಕೋ" ಎಂದು. ನಾನು ಕೃತಾರ್ಥಳಾದೆನೆಂದು ಭಾವಿಸಿದೆ.

ನೋಡುನೋಡುತ್ತಿರುವಂತೆ ಅನೇಕ ಸ್ತ್ರೀ ಭಕ್ತರು ಬಂದರು. ನನಗಂತೂ ಯಾರ ಪರಿಚಯವೂ ಇಲ್ಲ. ಅವರೆಲ್ಲ ಇಂದು ಇಲ್ಲಿಯೇ ಪ್ರಸಾದ ಪಡೆಯುವ ವ್ಯವಸ್ಥೆ ಆಗಿದೆ. ದೇವರ ನೈವೇದ್ಯವಾದ ಮೇಲೆ ನಾವೆಲ್ಲರೂ ಊಟ ಮಾಡಲು ಕುಳಿತೆವು. ತಮ್ಮ ನಿರ್ದಿಷ್ಟ ಸ್ಥಳದಲ್ಲಿ ಶ್ರೀಮಾತೆಯವರು ಕುಳಿತುಕೊಂಡು, ಮೂರು ಬಾರಿ ಸ್ವಲ್ಪ ಅನ್ನವನ್ನು ಸ್ವೀಕರಿಸಿ, ನನ್ನನ್ನು ಕರೆದು ಕೈಯ್ಯಲ್ಲಿ ಪ್ರಸಾದ ಇಟ್ಟರು. ಆ ಪ್ರಸಾದದ ಸುವಾಸನೆಯನ್ನು ನೆನೆಸಿಕೊಂಡರೆ ಇಂದಿಗೂ ಆಶ್ಚರ್ಯವಾಗುತ್ತದೆ! ನಂತರ ಎಲ್ಲರಿಗೂ ಸ್ವಲ್ಪ ಸ್ವಲ್ಪ ಪ್ರಸಾದ ಬಡಿಸಲಾಯಿತು. ಆಮೇಲೆ ಗೋಲಾಪ್‌ಮಾ ಸಹ ಊಟಕ್ಕೆ ಕುಳಿತರು. ಶ್ರೀಮಾತೆಯವರು ಎಂದಿನಂತೆ ಆನಂದಮೂರ್ತಿಯಾಗಿದ್ದರು. ನಗುನಗುತ್ತಾ ಮಾತನಾಡುತ್ತಾ, ನಮ್ಮ ಜೊತೆಗೆ ಊಟ ಮಾಡಲಾರಂಭಿಸಿದರು.

ಆದರೆ ದೀಕ್ಷೆಯ ಸಮಯದಲ್ಲಿ, ಅದೆಂಥ ಗಾಂಭೀರ್ಯ, ಅಂತರ್ಮುಖಿತ್ವ! ದುಷ್ಟರನ್ನು ನಿಗ್ರಹಿಸಲಿಕ್ಕೂ ಭಕ್ತರನ್ನು ಅನುಗ್ರಹಿಸಲಿಕ್ಕೂ ಸಮರ್ಥವಾಗಿರುವ ದೇವೀಮೂರ್ತಿಯಂತೆ ಅವರು ಕಂಡು ಬರುತ್ತಿದ್ದರು. ಆಗ ಅವರನ್ನು ನೋಡಿದಾಗ ಭಯವಾಗುತ್ತಿತ್ತು. ಅದು ಸಂಪೂರ್ಣವಾಗಿ ಇನ್ನೊಂದು ರೂಪವೇ ಆಗಿತ್ತು. ಈಗ ಶ್ರೀಮಾತೆಯವರ ಸೌಮ್ಯರೂಪವನ್ನು ನೋಡಿ "ಬದುಕಿದೆಯಾ ಬಡ ಜೀವವೇ!" ಎಂದು ನಿಟ್ಟುಸಿರುಬಿಟ್ಟೆ.

ಮುಂದೆ ಎಷ್ಟೊಂದು ಜನಕ್ಕೆ ಶ್ರೀಮಾತೆಯವರು ನಗುನಗುತ್ತಾ ನಿಂತುಕೊಂಡು, ಇಲ್ಲವೆ ಕುಳಿತುಕೊಂಡು ದೀಕ್ಷೆ ಕೊಡುವುದನ್ನು ನೋಡಿದ್ದೇನೆ. ದೀಕ್ಷಾರ್ಥಿಗಳೂ ಸಹ ತೃಪ್ತಿ ಆನಂದದಿಂದ ಹಿಂದಿರುಗುವುದನ್ನು ಕಂಡಿದ್ದೇನೆ. ಆದರೆ ಅಂದಿನ ದಿನ ದೀಕ್ಷಾಸಮಯದಲ್ಲಿ ಶ್ರೀಮಾತೆಯವರ ರೂಪ ಬೇರೆಯೇ ಆಗಿತ್ತು. ಕುತೂಹಲದಿಂದ ಕೆಲವರನ್ನು "ದೀಕ್ಷೆಯ ಸಮಯದಲ್ಲಿ ಶ್ರೀಮಾತೆ ನಿಮಗೆ ಹೇಗೆ ಕಂಡರು?" ಎಂದು ಸಹ ಕೇಳಿದ್ದೇನೆ. ಒಬ್ಬಳು ವಿಧವೆ ಅದಕ್ಕೆ ಉತ್ತರವಾಗಿ ಹೀಗೆ ಹೇಳಿದಳು: "ಅಂತಹ ವಿಶೇಷವೇನೂ ಇಲ್ಲ. ನನಗೆ ಮೊದಲೇ ಕುಲಗುರುವಿನಿಂದ ದೀಕ್ಷೆ ಆಗಿತ್ತು. ಶ್ರೀಮಾತೆಯವರ ಹೆಸರು ಕೇಳಿ ಇಲ್ಲಿಗೆ ಬಂದೆ. ಮೊದಲ ಮಂತ್ರವನ್ನು ಹತ್ತು ಬಾರಿ ಜಪಮಾಡಿ, ನಂತರ ತಾವು ಕೊಟ್ಟ ಮಂತ್ರವನ್ನು ಜಪಿಸುವಂತೆ ಹೇಳಿದರು. ಶ್ರೀರಾಮಕೃಷ್ಣರನ್ನು ತೋರಿಸುತ್ತಾ – 'ಇವರು ನಿನ್ನ ಗುರು. ಇದು (ಹಿಂದೆ ಉಪದೇಶ ಪಡೆದ ಮೂರ್ತಿ) ನಿನ್ನ ಇಷ್ಟ' ಎಂದು ಹೇಳಿದರು. ಕ್ರಮವಾಗಿ 'ಠಾಕೂರ್, ನನ್ನ ಹಿಂದಿನ ಮತ್ತು ಈಗಿನ ಕೆಟ್ಟ ಕೆಲಸಗಳ ಭಾರವನ್ನು ನೀನು ತೆಗೆದುಕೋ.....' ಇತ್ಯಾದಿ ಪ್ರಾರ್ಥಿಸುವಂತೆ ಹೇಳಿದರು." ಆ ವಿಧವೆಗೆ ಪ್ರೌಢ ವಯಸ್ಸಾಗಿತ್ತು. ಆದರೂ ಸರಳ ರೀತಿಯಲ್ಲಿ ಮಾತು ಹೀಗೆ ಮುಂದುವರೆಸಿದಳು: "ನನಗೇನಾಗಿದೆ ಹೇಳು ನೋಡೋಣ? ಜಪಕ್ಕೆ ಕುಳಿತರೆ ಅರ್ಧ ಗಂಟೆಯಲ್ಲಿ ಯಾರೋ ಜೋರಾಗಿ ಎಳೆದು ಎಬ್ಬಿಸುವಂತೆ ಭಾಸವಾಗುತ್ತದೆ. ನಿಮಗೂ ಸಹ ಈ ರೀತಿ ಆಗುತ್ತದೆಯೇ? ಎಷ್ಟೋ ಸಲ ಶ್ರೀಮಾತೆಯವರ ಬಳಿ ಹೇಳೋಣ ಅಂದುಕೊಂಡರೂ ಸಾಧ್ಯವಾಗುತ್ತಿಲ್ಲ. ನೀವೆಲ್ಲ ಮಾತೆಯವರ ಬಳಿ ಎಷ್ಟು ಸಲಿಗೆಯಿಂದಿದ್ದೀರಿ! ಹಾಗಾದರೆ, ಶ್ರೀಮಾತೆಯವರು ನನಗೆ ಮೋಸ ಮಾಡಿದರೆ?" ಇಷ್ಟೊಂದು ವಿಷಯ ಅವಳು ನನಗೆ ಹೇಳಬೇಕಿರಲಿಲ್ಲ. ಆದರೂ ಅವಳಿಗೆ ಸಮಾಧಾನ ಮಾಡುತ್ತಾ ಹೇಳಿದೆ: "ನಿಮಗೇನು ಕೇಳಬೇಕೆನಿಸಿದರೂ ಶ್ರೀಮಾತೆಯವರ ಬಳಿ ಹೋಗಿ ಕೇಳಬಾರದೆ? ಮೊದಮೊದಲು ಸ್ವಲ್ಪ ಮುಜುಗರ ಆಗುತ್ತದೆ. ಆಮೇಲೆ ಎಲ್ಲಾ ಸರಿಹೋಗುತ್ತದೆ. ನನಗೂ ಸಹ ಮೊದಲು ಹಾಗೇ ಆಗುತ್ತಿತ್ತು. ಈಗಲೂ ಸಹ ಒಮ್ಮೊಮ್ಮೆ ಅವರು ಎಷ್ಟು ಗಂಭೀರವಾಗಿರುತ್ತಾರೆ ಎಂದರೆ ಅವರ ಹತ್ತಿರ ಹೋಗಲೂ ಸಾಧ್ಯವಿಲ್ಲ."

ಸಂಜೆಯಾಗುತ್ತಿದ್ದಂತೆ ಭಕ್ತರೆಲ್ಲ ಒಬ್ಬೊಬ್ಬರಾಗಿ ಹೊರಡಲು ಅನುವಾದರು. ಕೆಲವರು ಆರತಿ ನೋಡಿ ಹೋಗುತ್ತಾರೆ. ಶ್ರೀಮಾತೆ ಬಟ್ಟೆ ಒಗೆದು ಬಂದು, ದೇವರಿಗೆ ಸಂಜೆಯ ನೈವೇದ್ಯ ಇಟ್ಟು, ಎಲ್ಲರಿಗೂ ಪ್ರಸಾದ ವಿತರಣೆ ಮಾಡಿದರು. *( ಮುಂದುವರಿಯುವುದು )*